

# ಆಮೆಯೋ? ಮೊಲವೋ?

**ನೆನಪಿಗೆ ಸಂದ ಗೆಳೆಯನಿಗೆ ಬರೆದ ಈ ಪತ್ರ, ಇಬ್ಬರು ವ್ಯಕ್ತಿಗಳ ನಡುವೆ ಹಬ್ಬಿಕೊಂಡ ಗೆಳೆತನದ ಅಚ್ಚರಿಯನ್ನು ಕಾಣಿಸುವುದರ ಜೊತೆಗೆ, 'ವೇಗವೇ ಪ್ರಧಾನ' ಎಂದು ನೆಚ್ಚಿಕೊಂಡವರಿಗೆ ಕಿವಿಮಾತನ್ನೂ ಹೇಳುವಂತಿದೆ; ಸಂವಹನ ಕ್ರಾಂತಿಯ ಸಂದರ್ಭದಲ್ಲಿ ನೇಪಥ್ಯಕ್ಕೆ ಸರಿದಿರುವ 'ಪತ್ರಸಂಸ್ಕೃತಿ'ಯ ಅನನ್ಯತೆಯನ್ನು ನೆನಪಿಸುವಂತಿದೆ.**

■ **ಹರಿಪ್ರಸಾದ್ ಬೇಸಾಯಿ**

**ಗೆಳೆಯಾ,**

ಹೇಗಿದ್ದೀಯಾ ಎಂದು ಕೇಳುವ ಸಮಯವಲ್ಲ ಇದು. ಆ ಅವಕಾಶವೇ ಇಲ್ಲವಾಗಿಸಿರುವ ನಿನ್ನ ಬಗ್ಗೆ ಸಂಕಟ, ಕೋಪ, ಒಟ್ಟೊಟ್ಟಿಗೆ ನುಗ್ಗಿ ಬರುತ್ತಿವೆ.

ಎಲ್ಲಿಂದ ಶುರು ಮಾಡಬೇಕೋ ತಿಳಿಯದಾಗಿದೆ.

ನಾವಿಬ್ಬರೂ ಓದುವಾಗಿನಿಂದ ಸ್ನೇಹಕ್ಕೆ ಬಿದ್ದೆವು. ಅದು ಸ್ನೇಹವೋ, ಮೋಹವೋ, ವ್ಯಾಮೋಹವೋ, ಆಕರ್ಷಣೆಯೋ ಗೊತ್ತಿಲ್ಲ. ಕಾಲೇಜು ದಿನಗಳು ಹುಡುಗಿಯರ ಬಗ್ಗೆ ಎಷ್ಟು ಆಕರ್ಷಕವೋ ಅಷ್ಟೇ ಹುಡುಗರ ಜೊತೆ ಕೂಡ. ನಾವೆಷ್ಟು ಗೆಳೆಯರನ್ನು ಪಡೆಯುತ್ತೇವೆಯೋ ಅವರೆಲ್ಲರೂ ನಮ್ಮ ವ್ಯಕ್ತಿತ್ವದ ಹಲವು ಶಾಖೆಗಳು. ಅದಕ್ಕೆ ನೂರಾರು ಕಾರಣಗಳು. ನಮ್ಮಿಬ್ಬರದೂ ಈಗ ಲೆಕ್ಕ ಹಾಕಿದರೆ ಸುಮಾರು ಮೂವತ್ತು ವರ್ಷಗಳ ಒಡನಾಟ. ನಮ್ಮ ಓದು ಬೇರೆ. ನಮ್ಮ ಆಸಕ್ತಿ ಬೇರೆ. ನಮ್ಮ ಜೀವನ ದೃಷ್ಟಿಗಳೇ ಬೇರೆ ಬೇರೆ. ಹೀಗಿದ್ದೂ ನಮ್ಮ ಓಡಾಟ, ಒಡನಾಟ.

ತೊಂಬತ್ತರ ದಶಕ ನಮ್ಮ ತಲೆಮಾರನ್ನು ಅಲುಗಾಡಿಸಿದ ಶಕೆ. ಬಹುರಾಷ್ಟ್ರೀಯ ಕಂಪನಿಗಳ ಆಗಮನ ಅನೇಕರಿಗೆ ಹೆಬ್ಬಾಗಿಲಿನಂತೆ ಕಂಡರೆ, ನನ್ನಂತಹ ಅನೇಕರು ಸೆಟಗೊಂಡಿದ್ದೆವು. ನಮ್ಮನ್ನು ನವಜೀತಗಾರರನ್ನಾಗಿ ಮಾಡಿಬಿಡುವ ಈ ಹೆಬ್ಬಾಗಿಲಿಗೆ ಬೆನ್ನು ತಿರುಗಿಸಿ ನಾನು ನನ್ನದೇ ಹಾದಿಯೊಂದನ್ನು ಅನ್ವೇಷಿಸಲು ತೊಡಗಿದ್ದೆ. ಚಿಕ್ಕದೊಂದು ಕೆಲಸ ಹಿಡಿದು ಬದುಕು ಕಟ್ಟಲು ಶುರುಮಾಡಿದ ನೀನು, ಈ ಮೂವತ್ತು ವರ್ಷಗಳಲ್ಲಿ ಹರಡಿಕೊಂಡ ವಿಸ್ತಾರ ಕಂಡು ಅಚ್ಚರಿಗೊಂಡಿದ್ದೇನೆ. ನಿನ್ನ ವೇಗದ ಬದುಕು ಕಂಡು ಭಯದಿಂದ ಹಿಂಜರಿದಿದ್ದೇನೆ. ಆದರೆ ಈ ವೇಗದ ಬದುಕಿನ ಮೂಲಕವೇ ನಿನ್ನ ಆಶೋತ್ತರಗಳನ್ನು ಒಂದೊಂದಾಗಿ ಈಡೇರಿಸಿಕೊಂಡದ್ದು ನೋಡಿ ಚಕಿತಗೊಂಡಿದ್ದೇನೆ. ಕೆಲವೇ ವರ್ಷಗಳಲ್ಲಿ ನೀನು ಕಾರುಗಳನ್ನು ಬದಲಿಸುತ್ತಲೇ ಹೋದೆ. ನೀನು ಹೊಸ ಹೊಸ ಕಾರು ತಂದಾಗೆಲ್ಲ ನನ್ನನ್ನು ಸುತ್ತಿಸುವುದು, ಆ ಕಾರಿನ ವಿಶೇಷಗಳನ್ನು ವಿವರಿಸುವುದು ಸಂಪ್ರದಾಯವೇ ಆಗಿಹೋಗಿತ್ತು. ಅದೆಲ್ಲ ಸಂತೋಷ ತಂದ ಸಂಗತಿಗಳೇ ಆಗಿದ್ದರೂ ಆ ಅವಧಿಯಲ್ಲೇ ನಡೆದ ರೈತ ಆತ್ಮಹತ್ಯೆಗಳು ಜೊತೆಜೊತೆಗೆ ನೆನಪಾಗಿ ನಾನೊಬ್ಬ ಈರ್ಷ್ಯೆಯ ಮನುಷ್ಯನೇ ಎಂದು ತೊಳಲಾಡಿ ಹೋಗಿದ್ದೇನೆ.

ಬೇರೆ ಬೇರೆ ದೇಶಗಳಿಗೆ ಹೋಗಿ ಬಂದ ನೀನು ಅಲ್ಲಿನ ಅನುಭವವನ್ನು ವಿವರಿಸುತ್ತಿದ್ದೆ. ನಾನು ಕಣ್ಣರಳಿಸಿ ಕೇಳಿಸಿಕೊಳ್ಳುತ್ತಿದ್ದೆ. ಥಾಯ್ಲೆಂಡಿಗೆ ಹೋದಾಗ ನನಗಾಗಿ ನೀನು ಕಸೂತಿಯಿಂದ ಕೂಡಿದ ಜುಬ್ಬಾ ತಂದುಕೊಟ್ಟಿದ್ದೆ. ಎಷ್ಟೋ ವರ್ಷಗಳ ಕಾಲ ಜತನವಾಗಿ ಕಾಪಾಡಿಕೊಂಡಿದ್ದನ್ನು